# ಮನಸೆಳೆಯುವ ಬ್ರೊಮಲೈಡ್





■ ಚಿತ್ರ-ಬರಹ: **ಗೀತಸದಾ, ಮೋಂತಿಮಾರು**



ಆಕರ್ಷಕ ಬಣ್ಣ, ವಿನ್ಯಾಸ ಹಾಗೂ ತನ್ನ ದೀರ್ಘಕಾಲಿಕ ಬಾಳಿಕೆಯಿಂದಾಗಿ ಅಲಂಕಾರಿಕ ಪುಷ್ಪಗಳಲ್ಲಿ ಬ್ರೊಮಲೈಡ್‌ಗೆ ಬಹಳ ಬೇಡಿಕೆ. ಪುಷ್ಪಾಲಂಕಾರದಲ್ಲಿ ಇತರ ಎಲ್ಲ ಹೂವುಗಳೊಡನೆ ಹೊಂದಿಕೊಳ್ಳುವುದೇ ಇದರ ವಿಶೇಷ. ನೋಡಲು ಕೃತಕ ಹೂವುಗಳಂತೆ ಕಂಡುಬರುವ ಬ್ರೊಮಲೈಡ್, ವಿಶೇಷ ಹೊಳಪನ್ನು ಹೊಂದಿದ್ದು ಗಡಸಾಗಿದೆ. ಕೆಂಪು, ಕಿತ್ತಳೆ, ಹಳದಿ, ನೇರಳೆ, ಪಿಂಕ್, ಬಿಳಿ ಮುಂತಾಗಿ ಹಲವಾರು ಬಣ್ಣಗಳಲ್ಲಿ ಈ ಹೂವು ಅರಳುತ್ತದೆ.

ಬ್ರೊಮಲೈಡ್ ಹೂವಿನ ಗಿಡಗಳು ನೋಡಲು ಅನಾನಾಸ್ ಗಿಡಗಳನ್ನು ಹೋಲುತ್ತಿದ್ದು, ಅನನಾಸ್ ಹಣ್ಣಿನ ಮೇಲ್ಭಾಗದಲ್ಲಿರುವ ಸುಳಿಯಂತೆಯೇ ಈ ಹೂವುಗಳಲ್ಲೂ ಸುಳಿಯಿದೆ. ಕೆಲವು ತಳಿಗಳ ಎಲೆಗಳ ಬದಿಗಳಲ್ಲಿ ಸಣ್ಣಸಣ್ಣ ಮುಳ್ಳುಗಳನ್ನೂ ಕಾಣಬಹುದು. ವೈಜ್ಞಾನಿಕ ಹೆಸರು ಬ್ರೊಮೋಲಿಯಾ. 'ಬ್ರೊಮೋಲಿಯೇಸಿ' ಕುಟುಂಬಕ್ಕೆ ಸೇರಿದ್ದು, ಲ್ಯಾಟಿನ್ ಅಮೆರಿಕಾ ಮತ್ತು ವೆಸ್ಟ್‌ಇಂಡೀಸ್‌ಗಳಲ್ಲಿ ಹೇರಳವಾಗಿ ಕಂಡುಬರುತ್ತದೆ.

## ಬೆಳೆಸುವ ವಿಧಾನ

ಇದನ್ನು ಬೆಳೆಸಲು ತಂಪಾದ ಹವಾಮಾನವಿರುವ ಉಷ್ಣವಾತಾವರಣ ಬೇಕು. ಶೇಕಡಾ 70ರಷ್ಟು ನೆರಳು ಮತ್ತು ಶೇಕಡಾ 30 ರಷ್ಟು ಬಿಸಿಲು ಬೇಕು. ನೇರಬಿಸಿಲು ಬೀಳುವ ಕಡೆಗಳಲ್ಲಿ ಈ ಗಿಡಗಳು ಕರಟಿಯೇ ಹೋಗಬಹುದು. ಗಿಡಗಳು ಸಣ್ಣದಾಗಿದ್ದರೂ ಹೂವುಗಳು ಭಾರವಾಗಿರುವುದರಿಂದ ಆಳವಾದ ಕುಂಡಗಳಲ್ಲಿ ಗಿಡಗಳನ್ನು ನಾಟಿ ಮಾಡಿದರೆ ಉತ್ತಮ. ಕುಂಡಕ್ಕೆ ಮಣ್ಣು, ಮರಳು ಮತ್ತು ಗೊಬ್ಬರದ ಪುಡಿ ಸುಮಾರು 2:1:1 ಪ್ರಮಾಣದಲ್ಲಿ ಇರುವಂತೆ ತುಂಬಿದರೆ ಸೂಕ್ತ ಎನ್ನುತ್ತಾರೆ ಬ್ರೊಮೋಲಿಯಾ ಹೂವುಗಳನ್ನು ಬೆಳೆಸಿದ ಗೃಹಿಣಿ ಸವಿತಾ.

ನಾಟಿ ಮಾಡಿದ ಆರು ತಿಂಗಳಲ್ಲಿ ಹೂವು ಬಿಡಲು ಪ್ರಾರಂಭಿಸುತ್ತದೆ. ಒಂದು ಗಿಡದಲ್ಲಿ ಒಂದೇ ಹೂವು! ಅರಳಿದ ಹೂವು ಗಿಡದಲ್ಲಿ ಸುಮಾರು ಆರು ತಿಂಗಳು ಬಾಳಿದರೆ, ಕತ್ತರಿಸಿದ ಹೂವುಗಳನ್ನು ಸುಮಾರು ಒಂದು ತಿಂಗಳು ಉಳಿಸಿಕೊಳ್ಳಬಹುದು. ಸಾಮಾನ್ಯವಾಗಿ ಮಳೆಗಾಲದಲ್ಲಿ ಹೂವು ಬಿಡಲು ಪ್ರಾರಂಭವಾಗುತ್ತದೆ. ಅರಳಿದ ಹೂವು ಬಾಡಲು ಪ್ರಾರಂಭವಾಗುತ್ತಿದ್ದಂತೆ ಬುಡದಲ್ಲಿ ಹೊಸ ಗಿಡ ಹುಟ್ಟುತ್ತದೆ. ನಾಟಿ ಮಾಡಿದ ಈ ಮರಿಗಿಡದಲ್ಲಿ ಸುಮಾರು ಎರಡು ತಿಂಗಳಲ್ಲೇ ಹೂವನ್ನು ಕಾಣಬಹುದು. ಮರಿಗಿಡಗಳು ಬಹಳ ಕಡಿಮೆ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತದೆ. ಬ್ರೊಮಲೈಡ್ ಗಿಡಗಳಿಗೆ ಹೆಚ್ಚಿಗೆ ನೀರು ಬೇಡ. ವಾರಕ್ಕೊಮ್ಮೆ ನೀರು ಸಾಕಾಗುತ್ತದೆ. ಬಹಳ ಬಿಸಿಲಿರುವಾಗ ವಾರಕ್ಕೆರಡು ಸಲ ನೀರು ಹಾಯಿಸಿದರೆ ಸಾಕು. ಹದಿನೈದು ದಿವಸಗಳಿಗೊಮ್ಮೆ ಗೊಬ್ಬರವನ್ನು ನೀರು ಸೇರಿಸಿ ನೀಡಬೇಕು. ಈ ಹೂವಿಗೆ ರೋಗ– ಕೀಟ ಬಾಧೆ ಇಲ್ಲವೆಂದೇ ಹೇಳಬಹುದು.

ಬ್ರೊಮಲೈಡ್ ಹೂವುಗಳಿಗೆ ದೀರ್ಘ ಬಾಳಿಕೆ ಮತ್ತು ತಾಜಾತನದಿಂದಾಗಿ ಬಹು ಬೇಡಿಕೆ. ಪುಷ್ಪಗುಚ್ಛ ತಯಾರಿಯಲ್ಲಿ, ಹೂ–ಜೋಡಣೆಯಲ್ಲಿ, ಮದುವೆ–ಸಮಾರಂಭಗಳಲ್ಲಿ, ಮಂಟಪ ಅಲಂಕರಿಸಲು ಉಪಯೋಗಿಸುತ್ತಾರೆ. ಬೇಡಿಕೆ ಹೆಚ್ಚಿರುವುದರಿಂದ ಗಿಡಗಳ ಬೆಲೆಯೂ ದುಬಾರಿ.